**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ**

ಸಿ.ಸಿ. ನಂ. 487/2019

ಸಿ.ಡಬ್ಲೂಃ 3 ಪಿ.ಡಬ್ಲೂಃ 3

ಹೆಸರುಃ ಶಂಕ್ರಪ್ಪ

ತಂದೆಯ ಹೆಸರುಃ ಶಿವಪ್ಪ ಹೂಗಾರ

ವಯಸ್ಸುಃ 62 ವರ್ಷ

ಉದ್ಯೋಗಃ ಒಕ್ಕಲುತನ

ವಿಳಾಸಃ ಮೆಣಸಗಿ , ತಾಃ ರೋಣ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 17-11-2022 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ -ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದಃ**

1. ಚಾಸಾ 1 ಮತ್ತು 2 ಇವರ ಪರಿಚಯ ಇದೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನಮ್ಮ ಊರಿನವರು. ನನಗೆ ಪರಿಚಯ ಇದೆ. ದಿಃ 21/10/2018 ರಂದು ಬೆಳಗ್ಗೆ 10-00 ಗಂಟೆಗೆ ನಾನು ಮತ್ತು ಚಾಸಾ 2 ರವರ ಸಮಕ್ಷಮ, ಹೊಳೆಮಣ್ಣೂರು ಗ್ರಾಮದಲ್ಲಿ ಚಾಸಾ 1 ರವರ ಮನೆಯ ಮುಂದೆ ಒಂದು ದಾಖಲೆಗೆ ಸಹಿ ಮಾಡಿದ್ದೇನೆ. ಸದರಿ ದಾಖಲೆ ಈಗ ನೋಡುತ್ತಿದ್ದೇನೆ ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಪಂಚನಾಮೆ ಆಗಿದ್ದು, ಅದನ್ನು ಈಗಾಗಲೇ ನಿಪಿಃ 2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ 2 ಬಿ ಎಂದು ಗುರುತಿಸಲಾಯಿತು. ನನ್ನ ಜೊತೆ ಆ ದಿನ ಚಾಸಾ2 ಸಹ ಅಲ್ಲಿ ಇದ್ದರು. ಚಾಸಾ 1 ರವರು ಪೊಲೀಸರಿಗೆ ಘಟನೆ ನೆಡದ ಸ್ಥಳ

ತೋರಿಸಿದ ಮೇರೆಗೆ ಅಲ್ಲಿ ನಮ್ಮ ಸಮಕ್ಷಮ ಪೊಲೀಸರು ಪಂಚನಾಮೆ ಮಾಡಿ , ಸ್ಥಳದಲ್ಲಿ ಇದ್ದ ಮೂ. ಮಾ.1 ರಿಂದ 3 ನ್ನು ಜಪ್ತು ಮಾಡಿಕೊಂಡಿರುತ್ತಾರೆ.

**ಪಾಟೀ ಸವಾಲುಃ- ಆರೋಪಿತರ ಪರ ಶ್ರೀ. ಎಸ್. ಬಿ. ಕುಸಗಲ್ಲ ವಕೀಲರಿಂದಃ**

**1.** ಮೂ. ಮಾ.1 ರಿಂದ 3 ಪೊಲೀಸರ ಕೈಯಲ್ಲಿ ಇದ್ದವು. ಪೊಲೀಸರು ಅದನ್ನು ತೆಗೆದುಕೊಂಡು ಬಂದಿದ್ದರು. ನಿಪಿಃ 2- ಪಂಚನಾಮೆ ಯಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ. ನನಗೆ ಈ ಘಟನೆ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ನಿಜ. ನಾನು ಹೋಗುವಷ್ಟರಲ್ಲಿ ಮೂ. ಮಾ.1 ರಿಂದ 3 ಅಲ್ಲಿ ಆಗಲೇ ಇದ್ದವು. ನಾನು ಆ ದಿನ ಪಂಚನಾಮೆಗೆ ಹೋಗಿರಲಿಲ್ಲ ಎಂದರೆ ಸರಿ ಅಲ್ಲ. ನಾನು ಚಾಸಾ 1 ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ**

**ನ್ಯಾಯಾಧೀಶರು ರೋಣ .**

**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ**

ಸಿ.ಸಿ. ನಂ. 487/2019

ಸಿ.ಡಬ್ಲೂಃ 2 ಪಿ.ಡಬ್ಲೂಃ 2

ಹೆಸರುಃ ಸಂಗಪ್ಪ ಪಟ್ಟಣಶೆಟ್ಟಿ

ತಂದೆಯ ಹೆಸರುಃ ಶಿವಪ್ಪ ಪಟ್ಟಣಶೆಟ್ಟಿ

ವಯಸ್ಸುಃ 60 ವರ್ಷ

ಉದ್ಯೋಗಃ ಒಕ್ಕಲುತನ

ವಿಳಾಸಃ ಮೆಣಸಗಿ , ತಾಃ ರೋಣ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 17-11-2022 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ -ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದಃ**

1. ಚಾಸಾ 1 ಮತ್ತು 3 ಇವರ ಪರಿಚಯ ಇದೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನಮ್ಮ ಊರಿನವರು. ನನಗೆ ಪರಿಚಯ ಇದೆ. ಸುಮಾರು 4 ವರ್ಷಗಳ ಹಿಂದೆ ಹೊಳೆಮಣ್ಣೂರು ಗ್ರಾಮದಲ್ಲಿ ಚಾಸಾ 1 ರವರ ಮನೆಯ ಮುಂದೆ ಒಂದು ದಾಖಲೆಗೆ ಸಹಿ ಮಾಡಿದ್ದೇನೆ. ಸದರಿ ದಾಖಲೆ ಈಗ ನೋಡುತ್ತಿದ್ದೇನೆ ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಪಂಚನಾಮೆ ಆಗಿದ್ದು, ಅದನ್ನು ಈಗಾಗಲೇ ನಿಪಿಃ 2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ 2 ಎ ಎಂದು ಗುರುತಿಸಲಾಯಿತು. ನನ್ನ ಜೊತೆ ಆ ದಿನ ಚಾಸಾ3 ಸಹ ಅಲ್ಲಿ ಇದ್ದರು. ನಿಪಿಃ 2 ಕ್ಕೆ ಸಹಿ ಮಾಡಿದ್ದಾರೆ.ಚಾಸಾ 1 ರವರು ಪೊಲೀಸರಿಗೆ ಘಟನೆ ನೆಡದ ಸ್ಥಳ ತೋರಿಸಿದ ಮೇರೆಗೆ ಅಲ್ಲಿ ನಮ್ಮ ಸಮಕ್ಷಮ

ಪೊಲೀಸರು ಪಂಚನಾಮೆ ಮಾಡಿ , ಸ್ಥಳದಲ್ಲಿ ಇದ್ದ ಮೂ. ಮಾ.1 ರಿಂದ 3 ನ್ನು ಜಪ್ತು ಮಾಡಿಕೊಂಡಿರುತ್ತಾರೆ. ಪಂಚನಾಮೆ ಮಾಡಿದಾಗ ಮಧ್ಯಾಹ್ಣ 12-00 ಗಂಟೆ ಆಗಿತ್ತು.

**ಪಾಟೀ ಸವಾಲುಃ- ಆರೋಪಿತರ ಪರ ಶ್ರೀ. ಎಸ್. ಬಿ. ಕುಸಗಲ್ಲ ವಕೀಲರಿಂದಃ**

**1.** ಪಂಚನಾಮೆಗೆ ಮಾಡಿದ ತಾರೀಖು ಈಗ ನನಗೆ ನೆನಪಿಲ್ಲ. ನಾನು ನನ್ನ ಸ್ವಂತ ಕೆಲಸಕ್ಕೆ ಚಾಸಾ 1 ರವರ ಮನೆಗೆ ದುಡ್ಡು ತೆಗೆದುಕೊಳ್ಳಲು ಆ ದಿನ ಹೋಗಿದ್ದೆ. ನಾನು ಹೋಗುವ ಮುಂಚೆ ಪೊಲೀಸರು ಅಲ್ಲಿ ಬಂದಿದ್ದರು. ಪೊಲೀಸರು ನನ್ನನ್ನು ಕರೆದರು. ನನ್ನನ್ನು ಕರೆದಾಗ ನಾನು ಮಠದ ಹತ್ತಿರ ಇದ್ದೆ. ಪಂಚನಾಮೆ ಮಾಡಿದ ಸ್ಥಳದ ಚೆಕ್ಕುಬಂದಿ ಹೇಳಲು ಬರುವುದಿಲ್ಲ. ನಾನು ಹೋಗುವ ಮುಂಚೆ ಪೊಲೀಸರು ಪಂಚನಾಮೆ ಬರೆದಿದ್ದರು ಎಂದರೆ ನಿಜ. ನಿಪಿಃ 2- ಪಂಚನಾಮೆ ಯಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ. ನನಗೆ ಈ ಘಟನೆ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ನಿಜ. ನಾನು ಹೋಗುವಷ್ಟರಲ್ಲಿ ಮೂ. ಮಾ.1 ರಿಂದ 3 ಅಲ್ಲಿ ಇದ್ದವು. ನಾನು ಆ ದಿನ ಪಂಚನಾಮೆಗೆ ಹೋಗಿರಲಿಲ್ಲ ಎಂದರೆ ಸರಿ ಅಲ್ಲ. ನಾನು ಚಾಸಾ 1 ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ**

**ನ್ಯಾಯಾಧೀಶರು ರೋಣ .**

**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ**

ಸಿ.ಸಿ. ನಂ. 487/2019

ಸಿ.ಡಬ್ಲೂಃ 1 ಪಿ.ಡಬ್ಲೂಃ 1

ಹೆಸರುಃ ಮೈಲಾರಪ್ಪ

ತಂದೆಯ ಹೆಸರುಃ ನಿಂಗಪ್ಪ ಚಿಕ್ಕಣ್ಣವರ

ವಯಸ್ಸುಃ 36 ವರ್ಷ

ಉದ್ಯೋಗಃ ಒಕ್ಕಲುತನ

ವಿಳಾಸಃ ಮೆಣಸಗಿ, ತಾಃ ರೋಣ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 17-11-2022 ರಂದು ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರಾಕರಿ ಅಭಿಯೋಜಕರವರಿಂದಃ**

**2.** ನಂತರ ಯಲ್ಲಪ್ಪಗೌಡ , ಮಾರುತಿ ಹಾಗೂ ಕಸ್ತೂರಿ , ರೇಣುಕಾ ಬಂದು ಜಗಳ ಬಿಡಿಸಿದರು. ಇವರು ಬಂದಿದ್ದಾರೆ ಎಂದು ಈ ದಿನ ಉಳಿದುಕೊಂಡಿರಿ , ನಿಮ್ಮ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದರು. ನಂತರ ನಾನು ಪೊಲೀಸ ಠಾಣೆಗೆ ಹೋಗಿ ದೂರನ್ನು ಕೊಟ್ಟೆ . ನಂತರ ರೋಣದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಹೋದೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಯಿತು. ಅದನ್ನು ಸಾಕ್ಷಿ ನೋಡಿ, ಅದರಲ್ಲಿರುವ ಸಹಿಯನ್ನು ತನ್ನದು ಎಂದು ಹೇಳಿರುತ್ತಾರೆ. ಸದರಿ ದಾಖಲೆ ದೂರಾಗಿದ್ದು, ಅದನ್ನು ನಿಪಿಃ 1 ಎಂದು ಸಾಕ್ಷಿಯ ಸಹಿಯನ್ನು ನಿಪಿಃ 1 ಎ ಎಂದು ಗುರುತಿಸಲಾಯಿತು. ದೂರು ಕೊಟ್ಟ ಮಾರನೇ ದಿನ ಪೊಲೀಸರು ಬಂದು ಪಂಚನಾಮೆ ಮಾಡಿದರು. ಪೊಲೀಸರಿಗೆ ನಾನು ಸ್ಥಳ ತೋರಿಸಿದೆ. ಪೊಲೀಸರು ಸ್ಥಳದಲ್ಲಿದ್ದ ಕಲ್ಲು, ಬಡಿಗೆ ಮತ್ತ ಚಪ್ಪಲಿ ವಶಕ್ಕೆ ತೆಗೆದುಕೊಂಡರು . ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಒಪ್ಪಿದ್ದರಿಂದ ಅದನ್ನು ನಿಪಿಃ 2 ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ನೋಡಿ ಆ ದಿನ ಜಗಳ ತೆಗೆದವರು ಇವರೇ ಎಂದು ಹೇಳುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಕಟ್ಟಿಗೆ, ಕಲ್ಲು ಮತ್ತು ಚಪ್ಪಲ್ಲಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅವುಗಳನ್ನು ಮೂ. ಮಾ.1 ರಿಂದ 3 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- ಆರೋಪಿತರ ಪರ ಶ್ರೀ. ಎಸ್. ಬಿ. ಕುಸಗಲ್ಲ ವಕೀಲರು ಸಮಯ ಕೇಳಿದ್ದು, ಕಾಲವಕಾಶ ನೀಡಿ , ಪ್ರಕರಣವನ್ನು ಮುಂದೂಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ**
**ನ್ಯಾಯಾಧೀಶರು ರೋಣ .**